ಅನ್ವಯಿಸಿಕೊಳ್ಳಲು ಹೊರಟರೆ ಒಂದೋ ನಗೆಪಾಟಲಿಗೆ ಒಳಗಾಗುತ್ತೇವೆ; ಇನ್ನೊಂದೋ ಅಪಾಯಕ್ಕೆ ತುತ್ತಾಗುತ್ತೇವೆ, ಅಷ್ಟೆ. ಮುಲ್ಲಾನಿಗೆ ಒದಗಿದ ಪಾಡನ್ನು 'ಯಜ್ಞಫಲ'ನಾಟಕದ ಈ ಪದ್ಯ ಮಾರ್ಮಿಕವಾಗಿ ನಿರೂಪಿಸುವಂತಿದೆ:

ಅನುಭವೇನ ವಿನಾಧಿಗತಂ ಶ್ರುತಂ
ಭವತಿ ನೈವ ನೃಣಾಮುಪಕಾರಕಂ |
ದಧಿನಿ ವರ್ತತ ಏವ ಹವಿಃ ಪುನಃ
ನ ಮಥನೇನ ವಿನಾ ತದವಾಪ್ಯತೇ ||

ಇದರ ತಾತ್ಪರ್ಯ: 'ಓದಿ ಕಲಿತದ್ದಾಗಲೀ ಕೇಳಿ ತಿಳಿದದ್ದಾಗಲೀ ಸ್ವತಃ ಅದರ ಅನುಭವ ಇಲ್ಲದ ಜನರಿಗೆ ಉಪಯುಕ್ತವಾಗದು; ಮೊಸರಿನಲ್ಲಿ ತುಪ್ಪವೇನೋ ಇರುತ್ತದೆ; ಆದರೆ ಮೊಸರನ್ನು ಕಡೆಯದೆ ಅದು ದೊರಕದು.'

ಮೊಸರಿನಲ್ಲಿ ತುಪ್ಪ ಇರುವುದು ಸತ್ಯ; ಅದರೆ ಮೊಸರನ್ನು ಕಡೆಯಬೇಕು. ಅದು ಬೆಣ್ಣೆಯಾಗಿ ಒದಗಬೇಕು. ಬೆಣ್ಣೆಯನ್ನು ಕಾಯಿಸಬೇಕು. ಆಮೇಲಷ್ಟೆ ತುಪ್ಪ ಸಿಗುವುದು. ಹೀಗಲ್ಲದೆ ಮೊಸರನ್ನೇ ತುಪ್ಪ ಎಂದು ಹೇಳಿ ಊಟಕ್ಕೆ ಬಡಿಸಿದರೆ ನಾವು ಹಾಸ್ಯಕ್ಕೆ ವಸ್ತುವಾಗುತ್ತೇವೆ. ಮೊಸರಿನಲ್ಲಿ ತುಪ್ಪವೇ ಕಾಣುತ್ತಿಲ್ಲವಲ್ಲ – ಎಂದು ಅದನ್ನು ಹೊರಗೆ ಚೆಲ್ಲಿದರೆ ಅದರಿಂದ ನಮಗೇ ನಷ್ಟ. ಆದುದರಿಂದ ವಿಷಯದ ಪೂರ್ವಾಪರ ಚೆನ್ನಾಗಿ ಗ್ರಹಿಸಿ ಆ ಬಳಿಕವಷ್ಟೆ ಅದನ್ನು ಸ್ವೀಕರಿಸಿ, ಅಳವಡಿಸಿಕೊಳ್ಳಬೇಕು. ಆಗಷ್ಟೇ ಅದು ವಿವೇಕವಾಗುತ್ತದೆ. ಆದರೆ ಜೀವನದಲ್ಲಿ ನಾವು ತೆಗೆದುಕೊಳ್ಳುವ ಎಷ್ಟೋ ನಿರ್ಧಾರಗಳಿಗೆ ಅರೆಬರೆ ಗ್ರಹಿಕೆಗಳೇ ಆಧಾರಗಳಾಗಿರುತ್ತವೆ. ಇದರ ಜೊತೆಗೆ ಪೂರ್ವಗ್ರಹವೂ ಸೇರಿಕೊಳ್ಳುತ್ತದೆ. ಪೂರ್ವಗ್ರಹ ಎಂಬ 'ಆಲಯ'ವನ್ನು ಕಟ್ಟಿಕೊಳ್ಳುವುದೇ ಸರಿಯಲ್ಲ. ಹೀಗೆ ಕಟ್ಟಿಕೊಂಡ ಇಕ್ಕಟ್ಟಿನ ಮನೆಗೆ ಬೀಗ ಹಾಕುವುದು ಇನ್ನೂ ಸರಿಯಲ್ಲ. ಹೀಗೆ ಬೀಗ ಹಾಕಿದ ಮೇಲೆ ಅದರ ಕೈಯನ್ನು ಕಳೆದುಕೊಳ್ಳುವಂಥ ಮೈ ಮರೆವು ತಪ್ಪು ಮಾತ್ರವೇ ಅಲ್ಲ, ಅಪಾಯಕಾರಿಯೂ ಹೌದು. ಇನ್ನು ಕಳೆದುಕೊಂಡ ಬೀಗದ ಕೈಯನ್ನು ಮತ್ತೆಲ್ಲೋ ಹುಡುಕುವುದು ದಡ್ಡತನವಲ್ಲದೆ ಮತ್ತೇನು?

ನಾವು ನಮ್ಮ ಜೀವನದಲ್ಲಿ ಸಂಗ್ರಹಿಸಿಕೊಳ್ಳುವ ವಸ್ತು – ವಿಷಯಗಳು ಪೂರ್ವಗ್ರಹ, ಅರ್ಧಜ್ಞಾನ, ಅವಿವೇಕಗಳಾದರೆ ನಮಗೇ ಕಷ್ಟ. ವಿಶಾಲವೂ ಸುಂದರವೂ ಆದ ಜೀವನವನ್ನೂ ಅದರ ಅಲಂಕಾರಗಳಾದ ಅರಿವು – ಆನಂದಗಳನ್ನೂ ಬಂಧಿಸುವಂಥವು ಇವು. ಈ ಬಂಧನದಿಂದ ಬಿಡುಗಡೆ ದೊರೆಯುವುದು ಬೇರೆ ಯಾರದೋ ಸಹಾಯದಿಂದ ಅಲ್ಲ. ಅವಿವೇಕದ ಮಹಲನ್ನು ಕಟ್ಟುವವರು ನಾವೇ; ಅನಂತರ ಅದಕ್ಕೆ ಪೂರ್ವಗ್ರಹದ ಬೀಗವನ್ನು ಜಡಿಯುವವರೂ ನಾವೇ. ಮೊದಲಿಗೆ ನಾವು ಅಂಥ ಮನೆಯನ್ನು ಕಟ್ಟಬಾರದು. ಮೇಲಾಗಿ ಅಲ್ಲಿ ಗಾಳಿ – ಬೆಳಕುಗಳು ಬಾರದಂತೆ ಅದನ್ನು ಮುಚ್ಚಲೂ ಹೋಗಬಾರದು. ಮುಚ್ಚಿದ ಬಾಗಿಲನ್ನು ತೆಗೆಯಬೇಕೇ ಹೊರತು ಅದರ ಬೀಗದ ಕೈಯನ್ನು ಕಳೆದುಕೊಳ್ಳುವುದು ಬುದ್ಧಿವಂತಿಕೆ ಎನಿಸದು. ನಾವು ಎಲ್ಲಿ ಎಚ್ಚರವನ್ನೂ ತಿಳಿವಳಿಕೆಯನ್ನೂ ಕಳೆದುಕೊಂಡೆವೋ ಅಲ್ಲಿಯೇ ಅವನ್ನು ಹುಡುಕಿಕೊಳ್ಳಬೇಕು. ಜೀವನದ ಅರ್ಥವನ್ನೂ ಸೊಗಸನ್ನೂ ಸವಿಯನ್ನೂ ನಮ್ಮ ಜೀವನದಲ್ಲಿಯೇ, ಎಂದರೆ ನಮ್ಮಲ್ಲಿಯೇ, ಅನ್ವೇಷಿಸಿಕೊಳ್ಳಬೇಕು.